**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.197/2020**

**CW- 9** **PW:5**

| | |
|---|---|
| ಸಾಕ್ಷಿಯ ಹೆಸರು | ಃ ತುಕಾರಾಮ ಮಜ್ಜಗಿ |
| ತಂದೆ /ಗಂಡನ ಹೆಸರು | ಃ ಬಾಳೇಶ |
| ವಯಸ್ಸು | ಃ 68 ವರ್ಷ |
| ಉದ್ಯೋಗ | ಃ ನಿವೃತ್ತ ನೌಕರ |
| ವಾಸಸ್ಥಳ | ಃ ಬೆಳಗಾವಿ |

ದಿಃ **06.08.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಸನ್ 2016 ರಿಂದ 2019 ರ ವರೆಗೆ ಹೆಸ್ಕಾಂ ಹುಬ್ಬಳ್ಳಿಯಲ್ಲಿ ಅಧಿಕ್ಷಕ ಅಬಿಯಂತರರು ಪಿ ಎಮ್ ಸಿ ಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಕುಡಿಯುವ ನೀರಿನ ಸಲುವಾಗಿ ಗುತ್ತಿಗೆ ಅಧಾರದ ಮೇಲೆ ಟೆಂಡರನ್ನು ಕರೆಯಲಾಗಿತ್ತು. ಅದರ ಪ್ರಯುಕ್ತ ಮಲ್ಲಪ್ಪ ಪರಪ್ಪ ಮರನೂರ ಆರೋಪಿ ಈತ ಟೆಂಡರ ಪ್ರಕ್ರಿಯೆಯಲ್ಲಿ ಆನಲೈನ್ ಮೂಲಕ ಬಾಗವಹಿಸಿದ್ದ. ಆರೋಪಿ ಆನಲೈನ್ ಮುಖಾಂತರ ಸಂಬಂದಪಟ್ಟ ದಾಖಲೆಗಳನ್ನು ಅಪ್ಲೋಡ ಮಾಡಿದ್ದು ಅವುಗಳನ್ನು ನಾವು ಡೌನಲೋಡ ಮಾಡಿಕೊಂಡೆವು. ಅವುಗಳ ಪೈಕಿ ಸಿಂಡಿಕೇಟ ಬ್ಯಾಂಕ್ ಶಾಖೆ ಸಾವಳಗಿಯ ಸಾಲ್ವನ್ಸಿ ಸರ್ಟಿಫಿಕೇಟ್ ನೋಡಿ ಅದರ ಧೃಡಿಕರಣದ ಸಲುವಾಗಿ ಶಾಖಾ ವ್ಯವಸ್ಥಾಪಕರು ಸಿಂಡಿಕೇಟ ಬ್ಯಾಂಕ್ ಶಾಖೆ ಸಾವಳಗಿ ಇವರಿಗೆ ದಿಃ 10.06.2016 ರಂದು ಪತ್ರವನ್ನು ನಾನೇ ಬರೆದೆ. ಆಗ ಚಾಸಾಃ 1 ರವರು ಸದರಿ ಸಾಲ್ವನ್ಸಿ ಸರ್ಟಿಫಿಕೇಟ್ ಖೊಟ್ಟಿ ಇದೆ ಅಂತಾ ಹೇಳಿ ನಮ್ಮಿಂದ ಈ ಪ್ರಮಾಣಪತ್ರ ಕೊಟ್ಟಿಲ್ಲ ಹಾಗೂ ಇದು ಫೇಕ್ ಇರುತ್ತದೆ ಅಂತಾ ದಿಃ 16.06.2016 ರಂದು ಉತ್ತರ ಕೊಟ್ಟರು. ದಿಃ 07.04.2019 ರಂದು ಎ ಎಸ್ ಐ ನವನಗರ ಪೊಲೀಸ್ ಠಾಣೆ ಇವರಿಗೆ ನನ್ನ ಹೇಳಿಕೆ ನೀಡಿದ್ದೇನೆ. ಹೇಳಿಕೆಯ ಜೊತೆ ನಾನು ಬರೆದ ಪತ್ರ, ಬ್ಯಾಂಕಿನವರು ನೀಡಿದ ಪತ್ರ ಹಾಗೂ ಆರೋಪಿ ಇವರು ಆನಲೈನನಲ್ಲಿ ನೀಡಿದ ಸಾಲ್ವನ್ಸಿ ಸರ್ಟಿಫಿಕೇಟ್, ಪತ್ರಗಳನ್ನು ನೀಡಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳು ನಿಪಿ.5 ರಿಂದ 7 ಆಗಿರುತ್ತವೆ. ನಿಪಿ.5 ರ ಮೇಲೆ ನನ್ನ ಸಹಿ ಇರುತ್ತದೆ.

ಆರೋಪಿ ನಕಲಿ ದಾಖಲೆಯನ್ನು ನೀಡಿ ಬ್ಯಾಂಕಗೆ ಹಾಗೂ ನಮ್ಮ ಇಲಾಖೆಗೆ ಮೋಸ ಮಾಡಿದ್ದಾರೆ.

**ಪಾಟಿಸವಾಲುಃ ಆರೋಪಿ ಪರ ಶ್ರೀ ಎಚ್ ಜಿ ಜಡ್ ವಕೀಲರಿಂದಃ**

ಆರೋಪಿ ಈ ಪ್ರಕರಣ ಆಗುವುದಕಿಂತ ಮೊದಲು ಪರಿಚಯ ಇಲ್ಲ. ಆರೋಪಿ ಖುದ್ದಾಗಿ ನಮ್ಮ ಕಚೇರಿಗೆ ಬಂದು ಪತ್ರಗಳನ್ನು ಹಾಜರುಪಡಿಸಿಲ್ಲ ಆತ ಆನಲೈನ್ ಮುಖಾಂತರ ಹಾಜರುಪಡಿಸಿದ್ದಾನೆ. ಬ್ಯಾಂಕನವರು ಆರೋಪಿ ಸಲ್ಲಿಸಿದ ಸಾಲ್ವನ್ಸಿ ಸರ್ಟಿಫಿಕೇಟ್ ಖೊಟ್ಟಿ ಇದೆ ಅಂತಾ ಹೇಳಿದ ನಂತರ ನಾನು ಹೋಗಿ ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ. ಎಲ್ಲ ಗುತ್ತಿಗೆ ಪ್ರಕ್ರಿಯೆಗಳಿಗೆ ಇದೆ ತರಹದ ಪ್ರೊಸಿಜರ್ ನಾವು ಫಾಲೊ ಮಾಡುತ್ತೇವೆ. ಕಂಪ್ಯೂಟರ ಬಗ್ಗೆ ನನಗೆ ಜ್ಞಾನ ಇದೆ. ಅಕೌಂಟ ಕ್ರಿಯೆಟ ಮಾಡುವುದು ಹಾಗೂ ಹ್ಯಾಕ್ ಮಾಡುವುದು, ಇನ್ನೊಬ್ಬರ ಹೆಸರಿನಲ್ಲಿ ಅಕೌಂಟ ಮಾಡುವುದು ಇವುಗಳ ಬಗ್ಗೆ ಕೇಳಿದ್ದೇನೆ. ಬಿಡ್ ಮಾಡುವುದನ್ನು ಸಾರ್ವಜನಿಕರ ಮಾಹಿತಿಗಾಗಿ ನೋಟಿಸ ಬೋರ್ಡನಲ್ಲಿ ಹಾಕಿರುತ್ತೇವೆ ಹಾಗೂ ಪತ್ರಿಕೆಯಲ್ಲೂ ಪ್ರಕಟಿಸಿರುತ್ತೇವೆ ಎಂದರೆ ಸರಿ. ಆರೋಪಿ ಸಾಲ್ವನ್ಸಿ ಸರ್ಟಿಫಿಕೇಟ್, ಬ್ಯಾಂಕ್ ಸ್ಟೇಟಮೆಂಟ, ಪ್ಯಾನ್ ಕಾರ್ಡ, ಆದಾರ ಕಾರ್ಡ್ ಇವುಗಳನ್ನು ನಮ್ಮ ಇಲಾಖೆಗೆ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿ ಆನಲೈನ್ ಮುಖಾಂತರ ಅಪ್ಲೋಡ ಮಾಡಬೇಕು ಎಂದು ನುಡಿಯುತ್ತಾರೆ. ದಾನಮ್ಮದೇವಿ ಇಲೆಕ್ಟ್ರಿಕಲ್ಸ ಇದರ ಲೈಸನ್ಸ ಪ್ರತಿಯನ್ನು ಪೊಲಿಸನವರಿಗೆ ಕೊಟ್ಟಿಲ್ಲ. ಆದಾರ ಕಾರ್ಡ ಹಾಗೂ ಪ್ಯಾನ್ ಕಾರ್ಡ ಪೊಲಿಸನವರಿಗೆ ಕೊಟ್ಟಿಲ್ಲ. ಬ್ಯಾಂಕ್ ಅಧಿಕಾರಿಗಳು ನನ್ನ ಜೊತೆ ಶಾಮೀಲಾಗಿ ಆರೋಪಿಗೆ ಗುತ್ತಿಗೆ ಕೆಲಸ ಸಿಗಬಾರದು ಬೇರೆ ಯಾರಿಗೂ ಸಿಗಲಿ ಎನ್ನುವ ಉದ್ದೇಶದಿಂದ ಸುಳ್ಳು ಮಾಹಿತಿ ಪತ್ರ ನೀಡಿದ ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ವಿಷಯ ಗೊತ್ತಿದ್ದರೂ ಸಹ ಫಿರ್ಯಾದಿ ಕೊಟ್ಟ ಸುಳ್ಳು ದೂರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲಿಸರಿಗೆ ನೀಡಿರುವ ದಾಖಲೆಗಳು ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.